Seshadripuram Educational Trust
Volume - 37
Edition - 2
Jan - 2025

# Vani

## The Voice of Excellence

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

# ವಾಣಿ

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು-560020
www.set.edu.in | info@set.edu



ಶೇಷಾದ್ರಿಪುರಂ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ 5



WPK conferred with Chanakya Award 3



ತುಮಕೂರು ವಿವಿಗೆ ನ್ಯಾಕ್‌ನಿಂದ B++ ಮಾನ್ಯತೆ 3



'ಮುದ್ದಣ ಕೃತಿ ಕರಜನ' ಲೋಕಾರ್ಪಣೆ 7



Ayudha Pooja in SET



Law College : Childhood Cancer Awareness Programme 11



NSS Drives for Kalyani Restoration and Environmental Care 10

**For Internal Circulation only**

Book-Post

To,

If undelivered, please return it to:
Editor, 'Vani' Quarterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

## Managing Editor
N.R. Pandith Aradhya
President

## Chief Editor
Nadoja Dr. Wooday P Krishna
Hon. General Secretary

## Editors
Shantamma, Sr. Journalist
Bhuvaneshwari R.S.
Dr Kavyashree H.
Pavithra Kumari B.P.

## Editorial Board
S. Seshanarayana
W.G. Ramakrishna
B.C. Lokanath
P.C. Narayana
M.S. Nataraj
Dr Vinay S.
Dr Bhargavi V.R.
Dr Raji Pillai
Dr Vatsala G.
Dr Pranitha B.S.
Dr S.N. Venkatesh
Prof. Jayaram
Prof. N.S. Satish
Dr. Jagadish G.T.
Prof. Sowmya Erappa K.
Prof. Vidya Shivannavar
Prof. G.K. Manjunath
Prof. Manjunath R.V.
Dr R. Manjunath
Prof. T. Doddegowda
Prof. Archana Swami N.
Prof. B.V. Basavaraju
Prof. Sumati C.
Prof. R. Mahalakshmi
Parimala L.K.
Netramani
Shylaja V.K.
H.N. Nanda
Sowmya B.M.
M.K. Chavan
S. Jagadamba


# Editorial

As 2024 comes to a close, we take this moment to reflect on a transformative year filled with challenges and triumphs, gratitude, and growth. We extend heartfelt thanks to our esteemed members of the management, heads of the institutions, dedicated staff, and inquisitive students who have been the driving force. Our deepest gratitude also goes to the trustees and parents, whose steadfast support has been instrumental in every success.

With a strong foothold in various educational domains, 2024 marked SET's venture into technical education with the establishment of the Seshadripuram Institute of Technology (SIT) in Mysuru, reflecting our commitment to innovation and growth in education. The year also saw the expansion of a new adjacent building infrastructure for Seshadripuram Institute of Commerce and Management, a reflection of our dedication to fostering growth and supporting its new programs. In addition, the introduction of postgraduate programs in MBA and MCA at Seshadripuram College this year has broadened the horizons of higher education within our institutions, showcasing our pursuit of academic excellence. This year, we celebrated numerous milestones—academic accolades, innovative projects, and advancements in inclusivity and infrastructure—all of which reaffirm our vision for excellence. Among the numerous academic achievements, a standout moment was Preetham R. P. from Seshadripuram Composite PU College securing the first rank in the II PU examinations - 2024.

As we look forward to 2025, the Vani Editorial Team wishes all our readers a joyous and prosperous new year. Together, let us step into the future with renewed energy, gratitude in our hearts, and hope in our minds.

Editor




For suggestions & feedback mail us at : editorialvani@gmail.com

# In the Media


ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಸಂಭ್ರಮದ ರಾಜ್ಯೋತ್ಸವ


ಪ್ರಜಾವಾಣಿ 10/11/2024


ಸಂಯುಕ್ತ ಕರ್ನಾಟಕ
ಸಂಸ್ಕೃತ, ಪ್ರಾಕೃತದೊಂದಿಗೆ ಬೆಳೆದ ಕನ್ನಡ


ಪ್ರಜಾವಾಣಿ
'ಸೈಬರ್ ಅಪರಾಧ ತಡೆಗೆ ಜಾಗೃತಿ ಅಗತ್ಯ'


ಪ್ರಜಾವಾಣಿ
'ಮುದ್ದಣ ಕೃತಿ ರಚನೆ' ಕೃತಿ ಬಿಡುಗಡೆ ಮಾಡಿದ ಹಂಪನಾ
ಸ್ವಾತಂತ್ರ್ಯ ಕಾಲದ ಕವಿ ಮುದ್ದಣ


ಪ್ರಜಾವಾಣಿ


ಸಂಜೆ ಎಕ್ಸ್‌ಪ್ರೆಸ್
ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ ಡಾ.ಎಸ್.ಎನ್. ಸತೀಶ್ ನೇಮಕ


ಆಂದೋಲನ


ಶೇಷಾದ್ರಿಪುರ ಕಾಲೇಜಿನಲ್ಲಿ ಕನ್ನಡ ನಾಡಹಬ್ಬದ ಸಂಭ್ರಮ


ಸಂಯುಕ್ತ ಕರ್ನಾಟಕ
ಹೊಸ ತಲೆಮಾರಿನವರಿಗೆ ತಲುಪದ ಹಳೆಗನ್ನಡ ಕಾವ್ಯ


STAR OF MYSORE
STAR SPORTS Monday 25th November 2024
Overall Champions in Weightlifting


ಮೈಸೂರು ಮಿತ್ರ
ಶೇಷಾದ್ರಿಪುರಂ ಕಾಲೇಜಲ್ಲಿ ಕನ್ನಡ ರಾಜ್ಯೋತ್ಸವ

"ಉತ್ತಮ ಗುರು ತನ್ನ ಶಿಷ್ಯರಿಂದಲೇ ಗುರುತಿಸಲ್ಪಡುತ್ತಾನೆ. ಯಾವ ಶಿಷ್ಯ ಗುರುವಿಗಿಂತ ಮುಂದೆ ಹೋಗುತ್ತಾನೋ ಅವನೇ ಉತ್ತಮ ಗುರು." – ವಿನೋಬಾ ಭಾವೆ

# Congratulations

## Nadoja Dr. Wooday P. Krishna honoured with Chanakya Awards-2024



The Public Relations Council of India (PRCI) has announced the prestigious Chanakya Awards-2024, celebrating the remarkable achievements of individuals and organizations that add significant value to the fields of Public Relations Sector. Nadoja Dr. Wooday P. Krishna, an esteemed Indian educationist, technocrat, and social activist, was honoured with the Chanakya Humanitarian Award during the 18th Global Communication Conclave held on November 8th and 9th 2024, in Mangalore.

The conclave also highlighted Dr. Krishna's outstanding 20+ years of service in advancing education, earning him the Outstanding Educator Award. The event's global significance was amplified by the participation of distinguished diplomats, including the Ambassador of Mauritius and representatives from Austria, Egypt, Israel, Switzerland, and the Philippines. Their presence reinforced the conclave's reputation as a premier international gathering of thought leaders and changemakers.

## Education Stalwarts 2024





**Nadoja Dr. Wooday P. Krishna**, has been awarded the prestigious title Education Stalwarts 2024. This recognition celebrates his exemplary contribution, sincerity, dedication, and relentless hard work in the field of education.

## India School Merit Awards 2024



**Seshadripuram Public School** proudly ranks No. 17 in India, No. 6 in Karnataka, and No. 6 in Bengaluru among Top ICSE Schools, earning the prestigious India School Merit Award 2024 for excellence in education.



### ಡಾ. ಎನ್.ಎಸ್. ಸತೀಶ್

ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿಯಾಗಿ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲರು ಡಾ. ಎನ್.ಎಸ್. ಸತೀಶ್ ಅವರನ್ನು ನೇಮಕ ಮಾಡಲಾಗಿದೆ.



### ಡಾ. ಸತ್ಯಮಂಗಲ ಮಹಾದೇವ

ಶೇಷಾದ್ರಿಪುರಂ ಸಂಜೆ ಕಾಲೇಜು, ಕನ್ನಡ ವಿಭಾಗದ ಮುಖ್ಯಸ್ಥರಾದ ಇವರಿಗೆ ಬೆಂಗಳೂರಿನ (ಬಿಬಿಎಂಪಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕನ್ನಡ ಸಂಘವು 2024ನೇ ಸಾಲಿನ ಸುವರ್ಣ ಕರ್ನಾಟಕ ರಾಜ್ಯೋತ್ಸವ ಕರ್ನಾಟಕರತ್ನ ಡಾ. ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ನೀಡಿದೆ.



### ಹನುಮಂತೇ ಗೌಡ ಕೆ.ಎಚ್.

ಶೇಷಾದ್ರಿಪುರಂ ಪ್ರೌಢಶಾಲೆಯಲ್ಲಿ ಸಹಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇವರನ್ನು ಶಿಕ್ಷಕ ದಿನಾಚರಣೆಯಂದು ಉತ್ತರ ವಲಯ ಶಿಕ್ಷಕರ ಸಂಘದಿಂದ 2024–25ನೇ ಸಾಲಿನ ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಿ ಗುರುವಂದನ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

## Appreciation Award



**Sathish Kumar K.R.** from Seshadripuram English High School, Kumara Park was honoured for his professional service by the Lions Club of Bengaluru Sankalpa .




### ನ್ಯಾಕ್‌ನಿಂದ B++ ಮಾನ್ಯತೆ

ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಅನುದಾನರಹಿತ ಕಾಲೇಜುಗಳಲ್ಲಿ **ಶೇಷಾದ್ರಿಪುರಂ ಕಾಲೇಜು** ಪ್ರಪ್ರಥಮವಾಗಿ ನ್ಯಾಕ್‌ನಿಂದ B++ ಮಾನ್ಯತೆಯನ್ನು ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ.



**Aditi Menon** from Seshadripuram Composite PU College was conferred with the "Young Scientist Award" at 15 th National Women Science Congress conducted by Karnataka Samskrit University in association with Seshadripuram Educational Trust, for her paper titled 'Dream Insight: A Delve Into The Unconscious Mind' under the theme 'Patanjaleeyam'.

"Be the change that you wish to see in the world." – Mahatma Gandhi

# Achievements




**Gajendra Babu** of Seshadripuram English High School was honored with the Best Teacher Award 2024 during the Taluk-Level Teachers' Day 2024-25 event organized by the Dr. C.N. Ashwathanarayana Foundation and North-2 Teachers Association on 30th November.



The **Women's Throwball Team** of Seshadripuram College emerged as winners at the Intercollegiate Tournament organized by Transcend Group of Institutions.



**Suhas N. Gowda** from Seshadripuram Independent Pre-University College won the gold medal in the Hammer Throw at the Bangalore North District Athletics Championship 2024-25.




**Nachiketh Jog**, a Grade 10 student from Seshadripuram High School, Yelahanka, won a gold medal at the prestigious XV World Juniors Karate Championship 2024 in Russia. His exceptional performance has earned him the title of International Gold Medalist, bringing pride and global recognition to his school.



**Achyuth S. Balaji** of Seshadripuram Pre-University College, Yelahanka, participated in the 1st State Level Open Karate Championship at Loyola Composite PU College, winning a silver medal in Kumite and a bronze medal in the Kata competition.



**M. Janani** of Seshadripuram Independent Pre-University College, won the Bronze medal at the Bangalore North District Level Air Pistol Shooting Championship 2024-25.



Students of Seshadripuram Institute of Commerce and Management - **Dhruthi K.R.** participated in the Inter Collegiate Swimming Competition and won gold medals and silver medals and individual medley. **Harshitha P.** secured silver medals, as well as a bronze medal.



Students from Seshadripuram Degree College, Mysore, actively participated in the inter-collegiate Weightlifting Competition organized by the University of Mysore from October 28 to 30. The college's team secured the overall championship in both men's and women's categories.




**Postgraduate students** of Seshadripuram College won the Usha Nagaraj Rolling Trophy and a prize of ₹ 50,000 at the FKCCI 16th Manthan Business Plan Competition. They also secured the second runner-up position, winning ₹ 1,00,000.



**Hemadri B.** of Seshadripuram Evening PU College won the gold medal in the 43 kg weightlifting competition organized by the Karnataka State Weightlifters Association and has been selected for Nationals weight lifting competition.



**Himagowri S.J.** (Grade 10) won Gold in the U-17 Girls' Air Rifle Peep Sight category and **Vaishnavi S.J.** (Grade 7) secured Gold in the U-14 Air Pistol category at the Karnataka State Level Shooting Competition 2024, organized by Seshadripuram English High School.



**Vishal Kumar N** of Seshadripuram College has won a Gold Medal at the Dasara District-Level Wrestling Competition held at Kanteerava Stadium in September and a Bronze Medal at the Dasara State-Level Wrestling Competition in Mysuru in October. He has secured a Silver Medal at the Bengaluru City University Wrestling Championship hosted by St. Francis College in November and another Silver Medal at the SET Founders Cup Powerlifting Competition at Seshadripuram College. Additionally, he showcased his skills at the South West Zone Inter-University Judo Tournament held at LNCT University, Bhopal.



**CDT Kadiravan** of Seshadripuram College 5/2 Coy, 2 Karnataka Battalion NCC, has been selected for Agniveer (2024) at Pune (Nashik).



The **Men's Kabaddi Team** of Seshadripuram College emerged as winners at the Alliance Alpha Kabaddi Tournament 2024 organized by Alliance University on 16th and 17th November, securing a cash prize of ₹40,000.



Seshadripuram Institute of Commerce and Management NCC Cadets won the Over All Team Championship in the NCC Inter-Collegiate Drill and Map Reading Competitions on 26th November, organized by Seshadripuram First Grade College, Yelahanka affiliated to 7 Karnataka Battalion NCC.

"ಪ್ರತಿಯೊಬ್ಬ ವ್ಯಕ್ತಿಯು ಎರಡು ರೀತಿಯ ಶಿಕ್ಷಣ ಹೊಂದುತ್ತಾನೆ. ಒಂದು ಇತರರು ಅವನಿಗೆ ನೀಡುವುದು. ಇನ್ನೊಂದು ಅವನು ಸ್ವಂತ ಕಲಿಯುವುದು."
– ಮಹಾತ್ಮ ಗಾಂಧೀಜಿ

# 69ನೇ ಕರ್ನಾಟಕ ರಾಜ್ಯೋತ್ಸವ

## ಕನ್ನಡ ಶ್ರೀಮಂತವಾದ ಪ್ರಾಚೀನ ಭಾಷೆ–ಬಿ.ಆರ್. ಲಕ್ಷ್ಮಣರಾವ್



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಕಾಲೇಜು, ನ. 14 – ಕಾರ್ಯಕ್ರಮಕ್ಕೆ ಬಿ.ಆರ್. ಲಕ್ಷ್ಮಣರಾವ್ ಕವಿ, ಚಲನಚಿತ್ರ ಸಾಹಿತಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಕನ್ನಡ ಶ್ರೀಮಂತವಾದ ಪ್ರಾಚೀನ ಭಾಷೆ. ಕನ್ನಡ ಭಾಷೆ ಹಲವಾರು ಮಹತ್ವದ ಕವಿಗಳನ್ನು ಸೃಷ್ಟಿಸಿದೆ. ಆ ಕವಿಗಳೆಲ್ಲರೂ ಜೀವನ ಪ್ರೀತಿ, ಮಾನವೀಯ ಪ್ರೀತಿಯನ್ನು ಸಾರಿದ್ದಾರೆ ಎಂದು ತಿಳಿಸಿ, ಕೆಲವು ಸ್ವರಚಿತ ಕವನಗಳನ್ನು ವಾಚಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ವಹಿಸಿದ್ದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಮ್ಮ ಮಾತೃಭಾಷೆಯನ್ನು ನಾವು ಪ್ರೀತಿಸಬೇಕು. ಉಳಿದ ಭಾಷೆಗಳನ್ನು ಗೌರವಿಸಬೇಕು. ನಮ್ಮ ಮಾತೃಭಾಷೆಗೆ ನಮ್ಮ ಮೊದಲ ಆದ್ಯತೆಯಾಗಬೇಕು. ಕನ್ನಡ ನಮ್ಮ ಉಸಿರು, ಬದುಕು, ಸರ್ವಸ್ವ ಎಲ್ಲವೂ ಆಗಿರಲಿ. ಕನ್ನಡ ಭಾಷೆ ನಮ್ಮ ಹೃದಯದ ಭಾಷೆ. ಈ ಭಾಷೆಯನ್ನು ಕಲಿತು ಕಲಿಸೋಣ. ಇದೇ ನಿಜವಾದ ಕನ್ನಡ ಹಬ್ಬ, ಇದೇ ನಿಜವಾದ ಕನ್ನಡ ತನ. ನಮ್ಮ ಮುಂದಿನ ಜನಾಂಗಕ್ಕೆ ನಮ್ಮ ಭಾಷೆಗಳನ್ನು ಪ್ರೀತಿಸುವುದನ್ನು ಕಲಿಸಬೇಕು ಎಂದು ತಿಳಿಸಿದರು. ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎಂ.ಎಸ್. ನಟರಾಜ್ ಅವರು ಮಾತನಾಡುತ್ತಾ ನಮ್ಮ ಮಾತೃಭಾಷೆಯನ್ನು ಕಡ್ಡಾಯವಾಗಿ ಕಲಿಯಿರಿ. ವ್ಯವಹಾರಿಕವಾಗಿ ಇತರೆ ಭಾಷೆಗಳನ್ನೂ ಕಲಿಯಿರಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಬಿ.ಜಿ. ಭಾಸ್ಕರ, ಕನ್ನಡ ವಿಭಾಗದ ಮುಖ್ಯಸ್ಥರಾದ ಎಚ್.ಎಂ. ಗೀತಾ, ಎಂ.ಎನ್. ಅರ್ಚನಾ ತೇಜಸ್ವಿ ಮತ್ತಿತರರು ಭಾಗವಹಿಸಿದ್ದರು.

## ಕನ್ನಡ ಕೇವಲ ಭಾಷೆಯಲ್ಲ, ಅದೊಂದು ಜೀವನಕ್ರಮ – ಎಂ.ಎಸ್. ಆಶಾದೇವಿ



**ಯಲಹಂಕ**, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ನ. 19 – ಕಾರ್ಯಕ್ರಮವನ್ನು ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರು, ಅನುವಾದಕರು, ವಿಮರ್ಶಕರೂ ಆದ ಡಾ. ಎಂ.ಎಸ್. ಆಶಾದೇವಿ ಉದ್ಘಾಟಿಸಿ ಮಾತನಾಡಿದರು. "ಭಾಷಾ ಬೆಳವಣಿಗೆಯ ವಿಷಯದಲ್ಲಿ ಕವಿಗಳು, ರಾಜರು ಕಲೆತು ಸೃಷ್ಟಿಸುವ ಮಾರ್ಗ ಯಶಸ್ವೀ ಮಾರ್ಗವಾಗುತ್ತದೆ. ಕನ್ನಡ ಕೇವಲ ಒಂದು ಭಾಷೆಯಾಗಿರದೆ, ಅದೊಂದು ಜೀವನಕ್ರಮವಾಗಿದ್ದು, ಇಡೀ ಬದುಕನ್ನು ಆವರಿಸಿದೆ. ನಮ್ಮ ಕನ್ನಡಕ್ಕೆ ಶರಣರಿಂದ ಮೊದಲುಗೊಂಡು ಅನೇಕ ಬರಹಗಾರರು ಕಟ್ಟಿದ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಅತಿ ದೊಡ್ಡ ವಿವೇಕ ಪರಂಪರೆ ಇದೆ. ಇಂದು ಅಂತಹ ವಿವೇಕ ಪರಂಪರೆಯನ್ನು ಉಳಿಸಿ, ಬೆಳೆಸಬೇಕಾಗಿದೆ" ಎಂದು ಅಭಿಪ್ರಾಯಪಟ್ಟರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ. ಡಾ. ವೂಡೇ ಪಿ. ಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಎನ್. ವೆಂಕಟೇಶ್, ಆಡಳಿತ ಮಂಡಳಿ ಸದಸ್ಯರಾದ ಡಾ. ಗೋದಾಮಣಿ, ಪ್ರಾಧ್ಯಾಪಕರಾದ ಡಾ. ಎಂ.ಎಲ್. ಅಶೋಕ್, ಡಾ. ಗೀತಾ ಡಿ.ಸಿ., ಪವಿತ್ರ ಕುಮಾರಿ ಬಿ.ಪಿ. ಉಪಸ್ಥಿತರಿದ್ದರು. ಸ್ತಬ್ಧ ಚಿತ್ರಗಳ ಪ್ರದರ್ಶನ, ಆಹಾರ ಪದಾರ್ಥಗಳ ಮೇಳ, ದೇಸೀ ಆಟಗಳು, ಪುಸ್ತಕ ಪ್ರದರ್ಶನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

## ಶಾಂತಿಯುತ ಸಮುದಾಯದ ಕಲ್ಪನೆ ಬೆಳೆಯಬೇಕು – ಡಾ. ವೂಡೇ ಪಿ. ಕೃಷ್ಣ



**ಮೈಸೂರು**, ಶೇಷಾದ್ರಿಪುರಂ ಪದವಿ ಕಾಲೇಜು, ನ. 28 – ಇಲ್ಲಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಕನ್ನಡ ವಿಭಾಗವು, ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವವನ್ನು ಆಚರಿಸಿತು. ಸಮಾರಂಭದಲ್ಲಿ ಪ್ರೊ. ಜಯಪ್ರಕಾಶ್‌ಗೌಡ, ನಿವೃತ್ತ ಅಧ್ಯಾಪಕರು, ಸಾಹಿತ್ಯ ಚಿಂತಕರು ಹಾಗೂ ಅಧ್ಯಕ್ಷರು, ಕರ್ನಾಟಕ ಸಂಘ, ಮಂಡ್ಯ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಮಾತನಾಡಿ ಮನುಷ್ಯ ಬೆಳೆಯುತ್ತಿದ್ದಂತೆ ನಾಡು ನನ್ನದು, ದೇಶ ನನ್ನದು ಎಂಬ ಅಭಿಮಾನ ಬೆಳೆಸಿಕೊಳ್ಳಬೇಕು, ಆಗ ಎಲ್ಲವೂ ಕ್ಷೇಮವಾಗಿರುತ್ತದೆ ಎಂದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರು ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣ ಅವರು ಅಧ್ಯಕ್ಷೀಯ ನುಡಿಗಳಲ್ಲಿ, ಸರ್ವಜನಾಂಗದ ಶಾಂತಿಯ ತೋಟ ಈ ಕರುನಾಡು ಎಂಬುದು ಕುವೆಂಪು ನೀಡಿದ ಶಾಶ್ವತ ಸಂದೇಶ. ಇದೇ ಸಂದರ್ಭದಲ್ಲಿ ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಡಾ. ಸೌಮ್ಯ ಈರಪ್ಪ ಕೆ., ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳಾದ ಅನಿಲ್‌ಕುಮಾರ್ ಜಿ.ಟಿ., ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಲಾವಣ್ಯ ಸಿ.ಪಿ., ಸಹಾಯಕ ಪ್ರಾಧ್ಯಾಪಕರಾದ ಸಿದ್ದಪ್ಪ ಕೆ.ಎಂ., ರಶ್ಮಿ ಕೆ.ಬಿ. ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ಕನ್ನಡ ಅನ್ನದ ಭಾಷೆಯಾಗಲಿ – ಚ.ಹ ರಘುನಾಥ್



**ತುಮಕೂರು**, ಶೇಷಾದ್ರಿಪುರಂ ಪದವಿ ಕಾಲೇಜು – ಕನ್ನಡ ಬಳಸಿದರೆ ಕನ್ನಡ ಉಳಿಯಲಿದೆ ಹಾಗೆಯೇ, ಕನ್ನಡ ಅನ್ನ ಕೊಡುವ ಭಾಷೆಯಾದರೆ ಮಾತ್ರ ಉಳಿಯಲು ಸಾಧ್ಯ ಎಂದು ಸುಧಾ ವಾರಪತ್ರಿಕೆ, ಮಯೂರ ಮಾಸ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಚ.ಹ. ರಘುನಾಥ್ ಅವರು ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಭಾಷೆಯನ್ನು ನಾವು ಉಳಿಸುವುದಲ್ಲ, ನಮ್ಮ ಉಳಿವಿಗಾಗಿ ಭಾಷೆಯನ್ನು ಉಳಿಸಬೇಕು ಎಂದರು. ಕನ್ನಡ ಅನ್ನದ ಭಾಷೆ ಕೂಡ ಆಗಬೇಕು. ಕನ್ನಡದಲ್ಲಿ ಓದಿದವರಿಗೆ ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಯಾಗಬೇಕು. ಭಾಷೆಯನ್ನು ಬಳಸುವುದರ ಜೊತೆಗೆ ಭಾಷೆಯಲ್ಲಿಯೇ ತಂತ್ರಜ್ಞಾನವನ್ನು ಸೃಷ್ಟಿಸಿ ಅದೇ ತಂತ್ರಜ್ಞಾನವನ್ನು ಬಳಸುವಂತಹ ಸ್ವಾವಲಂಬಿಗಳಾಗಬೇಕು ಎಂದರು. ಒಳ್ಳೆಯ ಓದುಗರಾದರೆ ಒಳ್ಳೆಯ ವ್ಯಕ್ತಿತ್ವ ನಿಮ್ಮದಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರು ಡಾ. ಜಗದೀಶ ಜಿ.ಟಿ. ಅವರು ಮಾತನಾಡಿ ನಮ್ಮ ಮಾತೃಭಾಷೆಗೆ ಘನತೆ ತರುವಂತೆ ನಾವೆಲ್ಲರೂ ಭಾಷೆಯಲ್ಲಿರುವ ಒಳ್ಳೆಯ ಪದಗಳನ್ನು ಮಾತನಾಡಬೇಕು. ಒಳ್ಳೆಯ ಆಲೋಚನೆಗಳನ್ನು ರೂಢಿಸಿಕೊಳ್ಳಬೇಕು, ಆಗ ಭಾಷೆಗೆ ನಿಜವಾಗಿ ಗೌರವ ಸಲ್ಲುತ್ತದೆ ಎಂದರು. ಸಾಂಸ್ಕೃತಿಕ ವೇದಿಕೆ ಸಂಚಾಲಕಿ ಡಾ. ಶ್ವೇತಾರಾಣಿ ಹೆಚ್, ಉಪನ್ಯಾಸಕಿ ಕಿಮ್ ಶುಖ, ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

"Mental health is not a destination, but a process. It's about how you drive, not where you're going." – Noam Shpancer



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ನ. 26 – ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಎನ್.ಪಿ. ಕಾರ್ತಿಕ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂತವಾಣಿ ಸುಧಾಕರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರು ಬಿ.ಜಿ. ಭಾಸ್ಕರ್ ವಿಶೇಷ ಆಹ್ವಾನಿತರಾಗಿದ್ದರು. ಕಾಲೇಜಿನ ಪ್ರಾಂಶುಪಾಲರು ಪ್ರೊ. ಆರ್.ವಿ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳೆಲ್ಲರೂ ಕೆಂಪು ಮತ್ತು ಹಳದಿ ಉಡುಪುಗಳನ್ನು ಧರಿಸಿ ಇಡೀ ಕಾಲೇಜಿನ ಆವರಣವು ಸಂಭ್ರಮದಿಂದ ತುಂಬಿತ್ತು.



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು, ನ. 28 – ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಹಾಸ್ಯ ಲೇಖಕರಾದ ನರಸಿಂಹಮೂರ್ತಿ ಅವರು ಆಗಮಿಸಿದ್ದು, ತಮ್ಮ ಹಾಸ್ಯದ ಶೈಲಿಯಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಮಕ್ಕಳಿಗೆ ಒದಗಿಸಿದರು. ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿ ಎಮ್.ಎಸ್. ನಟರಾಜ್ ಭಾಗವಹಿಸಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತ, ಕನ್ನಡಿಗರಲ್ಲಿ ಇರಬೇಕಾದ ಸ್ವಾಭಿಮಾನದ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳಿಂದ ಮನೋರಂಜನಾ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ದತ್ತಿಯ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಡಬ್ಲ್ಯೂ.ಜಿ. ರಾಮಕೃಷ್ಣ, ಪ್ರಾಂಶುಪಾಲರು ಪ್ರೊ. ಜಿ.ಕೆ. ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.



**ಕೆಂಗೇರಿ**, ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ನ. 1 – 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ಕನ್ನಡನುಡಿ ಹಬ್ಬವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಖ್ಯಾತ ಜನಪದ ಗಾಯಕಿ ಮತ್ತು ನಿರೂಪಕಿ ದಿವ್ಯಆಲೂರ್ ಅವರು ಆಗಮಿಸಿದ್ದರು. ವಿದ್ಯಾರ್ಥಿಗಳಿಗೆ ಕನ್ನಡದ ಮಹತ್ವವನ್ನು ವಿವರಿಸಿದರು. ತಮ್ಮ ಗಾಯನದ ಮೂಲಕ ವಿದ್ಯಾರ್ಥಿಗಳ ಕನ್ನಡ ಜಾಗೃತಿಯನ್ನು ಪ್ರಚೋದಿಸಿದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಸಿ. ಪ್ರಶಾಂತ್ ಕುಮಾರ್ ಅವರು ಮಾತನಾಡಿ ಕನ್ನಡವನ್ನು ಕನ್ನಡಿಗರು ಹೆಮ್ಮೆಯಿಂದ ಬಳಸಲೇಬೇಕಾದ ಅನಿವಾರ್ಯತೆಯನ್ನು ವಿವರಿಸಿದರು.

ಅಧ್ಯಕ್ಷತೆಯನ್ನು ಬಿ.ಎಂ. ಪಾರ್ಥಸಾರಥಿ, ಗೌರವ ಖಜಾಂಚಿಗಳು, ಶೇಷಾದ್ರಿಪುರಂ ಶಿಕ್ಷಣದತ್ತಿ ಅವರು ವಹಿಸಿದ್ದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ವಿದ್ಯಾರ್ಥಿಗಳ ಹೊಣೆಗಾರಿಕೆಯನ್ನು ನೆನಪಿಸಿದರು. ಪ್ರಾಂಶುಪಾಲರು ಡಾ. ಆರ್. ಮಂಜುನಾಥ್ ಸ್ವಾಗತ ಕೋರಿದರು. ವಿದ್ಯಾರ್ಥಿಗಳು ಕಾರ್ಯಕ್ರಮ ನಡೆಸಿಕೊಟ್ಟರು.



**ಮೈಸೂರು**, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು, ನ. 15 – ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಕ್ರಿಕೆಟ್ ಥ್ರೋಬಾಲ್ ಪಂದ್ಯಾವಳಿಗಳನ್ನು ಹಾಗೂ ಕನ್ನಡ ಸಾಂಸ್ಕೃತಿಕ ಸಾಪ್ತಾಹಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಉದಯಶಂಕರ್, ಪ್ರಾಂಶುಪಾಲರು, ಮಹಾರಾಜ ಪದವಿಪೂರ್ವ ಕಾಲೇಜು ಹಾಗೂ ರಘುನಾಥ್, ದೈಹಿಕ ಶಿಕ್ಷಣ ನಿರ್ದೇಶಕರು, ಪ್ರಾದೇಶಿಕ ಕಛೇರಿ, ವಿಟಿಯು ಮೈಸೂರು ಇವರು ಭಾಗವಹಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕ್ರೀಡೆಗಳು ಹೇಗೆ ಸಹಕಾರಿ ಎಂಬುದನ್ನು ತಿಳಿಸಿದರು.

ಬಿಜಿಎಸ್ ಕಾಲೇಜಿನ ಆಡಳಿತಾಧಿಕಾರಿ ಡಾ. ನರಸೇಗೌಡ ಹಾಗೂ ವಿಟಿಯು ಪ್ರಾದೇಶಿಕ ಸಂಚಾಲಕ, ಎಟಿಎಂಇ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು ಡಾ. ಮುರಳಿ, ಡಾ. ವೆಂಕಟೇಗೌಡ, ದೈಹಿಕ ಶಿಕ್ಷಕ ನಿರ್ದೇಶಕರಾದ ಡಾ. ರಾಘವೇಂದ್ರ, ಪ್ರಾಧ್ಯಾಪಕರುಗಳಾದ ಡಾ. ಜಿ. ರವಿ, ಡಾ. ಸುರೇಖ ಮನೋಜ್, ಡಾ. ಸಿ. ನಿಂಗಪ್ಪ, ಡಾ. ಸುಮನ್, ಡಾ. ವಸಂತಕುಮಾರ್, ಡಾ. ಕಿರಣ್ ಕುಮಾರ್, ಪವನ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು.



**ಯಲಹಂಕ**, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ನ. 8 – ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕರು, ರಂಗಭೂಮಿ ಕಲಾವಿದರಾದ ಟಿ.ಎಸ್. ನಾಗಾಭರಣ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕಾಲೇಜಿನ ಗೌರ್ನಿಂಗ್ ಕೌನ್ಸಿಲ್ ಛೇರ್ಮನ್ ಬಿ.ಸಿ. ಲೊಕನಾಥ್ ವಹಿಸಿದ್ದರು. ಪ್ರಾಂಶುಪಾಲರು ಪ್ರೊ. ಟಿ. ದೊಡ್ಡೇಗೌಡ ಉಪಸ್ಥಿತರಿದ್ದು, ಅತಿಥಿಗಳನ್ನು ಸನ್ಮಾನಿಸಿದರು. ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ನ. 16 – ಕಾಲೇಜಿನಲ್ಲಿ ಅಪರಂಜಿ ಕನ್ನಡ ಪರಿಷತ್ತು (ಕನ್ನಡ ವಿಭಾಗ) ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ವಿವೇಕಾನಂದ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಡಾ. ಬೆಳಕೆರೆ ಲಿಂಗರಾಜಯ್ಯ ಆಗಮಿಸಿ ಕನ್ನಡ ಭಾಷೆ ಹಾಗೂ ಅದರ ಪ್ರಾಚೀನತೆ, ಕನ್ನಡ ಏಕೀಕರಣ ಮತ್ತು ರಾಜ್ಯೋತ್ಸವದ ಮಹತ್ವವನ್ನು ಕುರಿತು ಮಾತನಾಡಿದರು. ಕಾಲೇಜು ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರು ಪ್ರೊ. ಕೆ.ಪಿ. ನರಸಿಂಹಮೂರ್ತಿ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರು ಪ್ರೊ. ವಿದ್ಯಾ ಶಿವಣ್ಣವರ್ ಹಾಗೂ ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

"ಮನುಷ್ಯರಲ್ಲಿ ಪ್ರೇಮವನ್ನು ಮೂಡಿಸುವ ಸರಳಜೀವನವನ್ನು ಕಲಿಸುವ ವಿದ್ಯೆಯೇ ಶ್ರೇಷ್ಠವಾದದ್ದು." – ಟಾಲ್‌ಸ್ಟಾಯ್

# Events

## ‘ಮುದ್ದಣ ಕೃತಿ ಕರಜನ’ ಲೋಕಾರ್ಪಣೆ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸಂಜೆ ಕಾಲೇಜು, ಅ. 16 – ಗೋಧೂಳಿ ಕನ್ನಡ ಸಂಘ ಮತ್ತು ಮಂಗಳೂರಿನ ಶೋಧನಾ ಪ್ರಕಾಶನವು ಪ್ರೊ. ಎ.ವಿ ನಾವಡ ಅವರು ಸಂಪಾದಿಸಿರುವ ‘ಮುದ್ದಣ ಕೃತಿ ಕರಜನ’ (ಮುದ್ದಣ ಕವಿಯ ಸಮಗ್ರಕಾವ್ಯ ಸಂಪುಟ) ಕೃತಿ ಲೋಕಾರ್ಪಣೆ ಸಮಾರಂಭವನ್ನು ಶೇಷಾದ್ರಿಪುರಂ ಸಂಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ನಾಡಿನ ಹಿರಿಯ ಸಂಶೋಧಕರು ಹಾಗೂ ವಿದ್ವಾಂಸರಾದ ನಾಡೋಜ ಹಂಪ ನಾಗರಾಜಯ್ಯ ಕೃತಿಯ ಲೋಕರ್ಪಣೆ ನೆರವೇರಿಸಿದರು. ಶೇಷಾದ್ರಿಪುರಂ ಶಿಕ್ಷಣದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳು ಹಾಗೂ ಶಿಕ್ಷಣ ತಜ್ಞರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಶಾಸ್ತ್ರಚೂಡಾಮಣಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆಯವರು ‘ಮುದ್ದಣ ಕೃತಿ ಕರಜನ’ ಕೃತಿ ಕುರಿತು ಮಾತನಾಡಿದರು. ಸಂಪಾದಕರಾದ ಪ್ರೊ. ಎ.ವಿ. ನಾವಡ ಅವರು ಪ್ರಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದಲ್ಲಿ ಸಭಾಪತಿ ಯು.ಟಿ. ಖಾದರ್, ಶೋಧನಾ ಪ್ರಕಾಶನದ ಪ್ರಕಾಶಕರಾದ ಡಾ. ಗಾಯತ್ರೀ ನಾವಡ, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ಎಸ್. ಸತೀಶ್, ಗೋಧೂಳಿ ಕನ್ನಡ ಸಂಘದ ಸಂಚಾಲಕರಾದ ಡಾ. ಸತ್ಯಮಂಗಲ ಮಹಾದೇವ ಹಾಗೂ ಇತರರು ಉಪಸ್ಥಿತರಿದ್ದರು.

## ಶ್ರೀ ಅನ್ನದಾನಯ್ಯ ಪುರಾಣಿಕ ಸ್ಮಾರಕದತ್ತಿ ವಿಶೇಷ ಉಪನ್ಯಾಸ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸಂಜೆ ಕಾಲೇಜು, ನ.5 – ಇಲ್ಲಿನ ಗಾಂಧೀ ಅಧ್ಯಯನ ಕೇಂದ್ರ, ಗಾಂಧೀ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಶೇಷಾದ್ರಿಪುರಂ ಸಂಜೆ ಕಾಲೇಜು, ಗಾಂಧಿ ಅಧ್ಯಯನ ಕೇಂದ್ರ ಹಾಗೂ ‘ಸಮರ್ಪಣ’ ಶೇಷಾದ್ರಿಪುರಂ ಸಂಜೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ‘ಸಾಹಿತ್ಯರತ್ನ’ ಶ್ರೀ ಅನ್ನದಾನಯ್ಯ ಪುರಾಣಿಕ ಸ್ಮಾರಕದತ್ತಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಾಹಿತ್ಯರತ್ನ ಶ್ರೀ ಅನ್ನದಾನಯ್ಯ ಪುರಾಣಿಕ ಅವರ ಶಿಸ್ತುಬದ್ಧ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು. “ಅನ್ನದಾನಯ್ಯ ಅವರಿಗೆ ಮೂಲ ಪ್ರೇರಣೆ ಗಾಂಧಿ, ಬುದ್ಧ, ಬಸವ. ಅವರು ಅದ್ಭುತವಾದ, ಸಾರ್ಥಕವಾದಂತಹ ಜೀವನವನ್ನು ನಡೆಸಿದರು. ಕಾರ್ಯಕ್ರಮವನ್ನು ನಡೆಸಬೇಕಾದರೆ ಅವರು ಮಾಡುತ್ತಿದ್ದಂತಹ ರೂಪುರೇಷೆ ನಿಜಕ್ಕೂ ನಮಗೆಲ್ಲಾ ಮಾದರಿಯಾಗಿತ್ತು. ಪ್ರತಿಯೊಂದನ್ನೂ ಕೂಡ ಅವರು ಶಿಸ್ತುಬದ್ಧವಾಗಿ ನಡೆಸುತ್ತಿದ್ದರು” ಎಂದು ಅವರು ತಿಳಿಸಿದರು.

‘ಗಾಂಧಿ, ಉಪನಿಷತ್ತು, ಮತ್ತು ವಚನಗಳು ಈ ಮೂರಕ್ಕೂ ಅವಿನಾಭಾವ ಸಂಬಂಧವಿದೆ. ಉಪನಿಷತ್ತಿನಲ್ಲಿ ಅಡಕವಾಗಿರುವ ಮುಖ್ಯ ಅಂಶ, ವಚನಕಾರರು ಹೇಗೆ ಅದನ್ನು ತಮ್ಮ ಅನುಭವದಲ್ಲಿ ಹಿಡಿದಿಟ್ಟುಕೊಂಡು ನೋಡಿದರು ಎನ್ನುವುದು. ಇನ್ನು ಅನ್ನದಾನಯ್ಯ ಅವರ ಕೆಲಸ ಬಹಳಷ್ಟು ವಿಶೇಷತೆಯಿಂದ ಕೂಡಿದೆ’ ಎಂದು ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ತಿಳಿಸಿದರು.

ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲರು, ಗಾಂಧಿ ಶಾಂತಿ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಎನ್.ಎಸ್. ಸತೀಶ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ‘ವಚನ ಸಾಹಿತ್ಯ ಮತ್ತು ಉಪನಿಷತ್ತುಗಳು’ ಕುರಿತು ವಿಶೇಷ ಉಪನ್ಯಾಸವನ್ನು ಡಾ. ಟಿ.ಎನ್. ವಾಸುದೇವ ಮೂರ್ತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರೊ. ಚಂದ್ರಿಕಾ ಪುರಾಣಿಕ ಹಾಗೂ ಮಗ ಉದಯಶಂಕರ ಪುರಾಣಿಕ ಮತ್ತು ಮೊಮ್ಮಗಳು ದೀಪ್ತಿ ಪುರಾಣಿಕ, ಶೇಷಾದ್ರಿಪುರಂ ಸಂಜೆ ಕಾಲೇಜಿನ ಗಾಂಧೀ ಅಧ್ಯಯನ ಕೇಂದ್ರದ ಸಂಚಾಲಕರಾದ ಡಾ. ಸತ್ಯಮಂಗಲ ಮಹಾದೇವ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

## ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯಲ್ಲಿ ನವೆಂಬರ್ 13ರಂದು ಗಾಂಧಿ ರಿಸರ್ಚ್ ಫೌಂಡೇಷನ್, ಗಾಂಧಿ ಭವನ ವತಿಯಿಂದ ಪ್ರತಿ ವರ್ಷ ನಡೆಸುವ ಗಾಂಧಿ ವಿಚಾರ ಸಂಸ್ಕಾರ ಪರೀಕ್ಷೆಯನ್ನು ನಡೆಸಲಾಯಿತು. ಶಾಲೆಯಿಂದ ಸುಮಾರು 80 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದರು.

## ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ಕುರಿತ ಉಪನ್ಯಾಸ



**ಯಲಹಂಕ**, ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು, ನ. 15 – ಕನ್ನಡ ವಿಭಾಗದ ವತಿಯಿಂದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ಕುರಿತು ವಿಶೇಷ ಉಪನ್ಯಾಸ ಹಾಗೂ ‘ವಿಚಾರ ಸಂಕಿರಣ’ವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಕಾರ್ಯದರ್ಶಿಗಳಾದ ಎಂ.ಸಿ. ನರೇಂದ್ರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದ ಪ್ರಸ್ತುತತೆಯನ್ನು ಕುರಿತು ತೇಜಸ್ವಿಯವರ ಸಮಗ್ರ ಸಾಹಿತ್ಯದ ಸಂಪಾದಕರು, ಪೂರ್ಣಚಂದ್ರ ಕನ್ನಡ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ನಿರ್ದೇಶಕರೂ ಆದ ಪ್ರೊ. ಕೆ.ಸಿ. ಶಿವಾರೆಡ್ಡಿಯವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಪೂರ್ಣಚಂದ್ರ ತೇಜಸ್ವಿಯವರನ್ನು ಕುರಿತ ಸಾಕ್ಷ್ಯಚಿತ್ರವನ್ನು ತೋರಿಸಲಾಯಿತು. ನಂತರ 300ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತೇಜಸ್ವಿಯವರ ಸಾಹಿತ್ಯವನ್ನು ಕುರಿತು ಬರೆದರು, 40ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪ್ರಬಂಧವನ್ನು ಮಂಡಿಸಿದರು.

“The United Nations is our one great hope for a peaceful and free world.” – Ralph Bunche

## 52ನೇ ಅಂತರ ಪ್ರೌಢಶಾಲಾ ಕನ್ನಡ ಚರ್ಚಾಸ್ಪರ್ಧೆ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಪ್ರೌಢಶಾಲೆ, ನ. 26 – ಶಿಕ್ಷಣ ದತ್ತಿಯ ಮಾಜಿ ಕೋಶಾಧ್ಯಕ್ಷರಾದ ದಿವಂಗತ ಜಿ.ಕೆ. ಚಿಕ್ಕನರಸಿಂಹಯ್ಯನವರ ಸ್ಮರಣಾರ್ಥವಾಗಿ 52ನೇ ಅಂತರ ಪ್ರೌಢಶಾಲಾ ಕನ್ನಡ ಚರ್ಚಾಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅತಿಥಿಗಳಾಗಿ ಧರ್ಮದರ್ಶಿಗಳು ಡಬ್ಲ್ಯೂ.ಡಿ. ಅಶೋಕ್ ಹಾಗೂ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ರಾಮಲಿಂಗೇಶ್ವರ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಧರ್ಮದರ್ಶಿಗಳು ಕೆ. ಕೃಷ್ಣಸ್ವಾಮಿ ವಹಿಸಿಕೊಂಡಿದ್ದರು. ಹಲವು ಶಾಲೆಗಳಿಂದ ಆಗಮಿಸಿದ್ದ ಸ್ಪರ್ಧಿಗಳು 'ಇಂದಿನ ಪ್ರಜಾಪ್ರಭುತ್ವಕ್ಕಿಂತ ಅಂದಿನ ರಾಜಪ್ರಭುತ್ವವೇ ಉತ್ತಮ' ಎಂಬ ವಿಷಯದ ಪರವಾಗಿ ಹಾಗೂ ವಿರೋಧವಾಗಿ ವಾದಗಳನ್ನು ಮಂಡಿಸಿದರು. ಶೇಷಾದ್ರಿಪುರಂ ಪ್ರೌಢಶಾಲೆಯಿಂದ ಭಾಗವಹಿಸಿದ್ದ ಭಾವನ ಪಿ. ಪ್ರಥಮ ಬಹುಮಾನವನ್ನು ಹಾಗೂ ಭಾಗ್ಯಲಕ್ಷ್ಮಿ ಬಿ. ದ್ವಿತೀಯ ಬಹುಮಾನವನ್ನು ಪಡೆದು ಜೊತೆಗೆ ಪರ್ಯಾಯ ಪಾರಿತೋಷಕವನ್ನು ಶಾಲೆಗೆ ಗೆದ್ದುಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಕೃಷ್ಣಸ್ವಾಮಿ ಅವರು ಎಲ್ಲಾ ಮಕ್ಕಳ ವಾದ-ವಿವಾದಗಳನ್ನು ಶ್ಲಾಘಿಸಿದರು. ಕಾರ್ಯಕ್ರಮವನ್ನು ಆಯೋಜಿಸಿದ್ದ ಮುಖ್ಯೋಪಾಧ್ಯಾಯ ಎಂ.ಕೆ. ಚವ್ಹಾಣ್‌ರವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

## ಎಲ್.ಎಸ್.ಎಸ್ ಬದುಕು-ಬರಹ ಉಪನ್ಯಾಸ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಕಾಲೇಜು, ಸೆ. 24 – ಕಾಲೇಜಿನ ಕನ್ನಡ ಸಂಘ-ಕನ್ನಡ ವಿಭಾಗವು ಎಲ್.ಎಸ್.ಎಸ್ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಅವರ ಬದುಕು ಬರಹ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಹಿರಿಯ ಸಂಶೋಧಕರು, ಸಾಹಿತಿಗಳು, ಭಾಷಾ ವಿಜ್ಞಾನಿಗಳೂ ಆದ ನಾಡೋಜ ಹಂ.ಪ. ನಾಗರಾಜಯ್ಯನವರು ಆಗಮಿಸಿದ್ದು, ಕನ್ನಡ ಗೆಳೆಯರ ಬಳಗದ ಸಂಚಾಲಕರಾದ ರಾ.ನಂ. ಚಂದ್ರಶೇಖರ್ ಅವರು ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲರು ಡಾ. ಬಿ.ಜಿ. ಭಾಸ್ಕರ ವಹಿಸಿದ್ದರು.

ನಾಡೋಜ ಹಂ.ಪ.ನಾ.ರವರು ಮಾತನಾಡಿ ಕನ್ನಡ ಭಾಷೆ, ಸಂಸ್ಕೃತ ಹಾಗೂ ಪ್ರಾಕೃತ ಈ ಎರಡೂ ಭಾಷೆಗಳಿಂದ ಹೇಗೆ ಸಮೃದ್ಧವಾಗಿ ಬೆಳೆದಿದೆ ಎಂಬುದನ್ನು ತಿಳಿಸಿದರು. ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಕನ್ನಡ ಸಾಹಿತ್ಯದ ವಿಸ್ತಾರವನ್ನು ಇಮ್ಮಡಿಗೊಳಿಸಿ. ಹೊಸಗನ್ನಡ ಅರುಣೋದಯದ ಕಾಲದಲ್ಲಿ ಕನ್ನಡಿಗರಿಗೆ ಹೊಸ ಬಗೆಯನ್ನು ಪರಿಚಯಿಸಿದರು. ಒಂದು ತರಹದಲ್ಲಿ ಹೊಸಗನ್ನಡಕ್ಕೆ ಹೊಸ ಭೂಮಿಕೆಯನ್ನು ತಂದುಕೊಟ್ಟ ಹೆಗ್ಗಳಿಕೆ ಎಲ್.ಎಸ್.ಎಸ್. ಅವರಿಗೆ ಸಲ್ಲಬೇಕು ಎಂದು ಅವರು ತಿಳಿಸಿದರು. ರಾ.ನಂ. ಚಂದ್ರಶೇಖರ್‌ರವರು ಮಾತನಾಡಿ ಇಂಗ್ಲೀಷ್ ಲೇಖನಗಳನ್ನು ಕನ್ನಡಿಗರಿಗೆ ಮನಮುಟ್ಟುವಂತೆ ತಿಳಿಸಿದ ಎಲ್.ಎಸ್. ಶೇಷಗಿರಿರಾವ್ ಅವರನ್ನು ಮರೆಯುವಂತಿಲ್ಲ ಎಂದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಉಪಸ್ಥಿತರಿದ್ದರು.

## ದೇವರನಾಮ ಗಾಯನ, ವಾದ್ಯ ಸಂಗೀತ ಸ್ಪರ್ಧೆ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಪ್ರೌಢಶಾಲೆ, ನ. 27 – ಶಿಕ್ಷಣ ದತ್ತಿಯ ಮಾಜಿ ಗೌರವ ಪ್ರಧಾನ ಕಾರ್ಯದರ್ಶಿಗಳಾದ ದಿವಂಗತ ಕೆ.ಸಿ. ಪುಟ್ಟನರಸಯ್ಯನವರ ಸ್ಮರಣಾರ್ಥವಾಗಿ 16ನೇ ಅಂತರ ಪ್ರೌಢಶಾಲಾ ದೇವರನಾಮ ಗಾಯನಸ್ಪರ್ಧೆ ಹಾಗೂ ವೈಣಿಕಶಿಖಾಮಣಿ ವೀಣೆಶೇಷಣ್ಣನವರ ಸ್ಮರಣಾರ್ಥ 11ನೇ ಅಂತರ ಪ್ರೌಢಶಾಲಾ ವಾದ್ಯಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಶೇಷಾದ್ರಿಪುರಂ ಶಿಕ್ಷಣದತ್ತಿಯ ಗೌರವ ಸಹಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಗೀತ ಶಿಕ್ಷಕಿ ಹಾಗೂ ಆರ್ಯಭಟ ಪ್ರಶಸ್ತಿ ಪುರಸ್ಕೃತರು ಛಾಯಾರವರು ಆಗಮಿಸಿದ್ದರು. ಛಾಯಾ ಅವರು 'ಸೋಲೇ ಗೆಲುವಿನ ಮೆಟ್ಟಿಲು' ಎಂಬ ಕಿವಿಮಾತನ್ನು ಸ್ಪರ್ಧಿಗಳಿಗೆ ಹೇಳಿದರು. ಸಂಗೀತವನ್ನು ಕಲಿಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ದೇವರನಾಮ ಗಾಯನ ಸ್ಪರ್ಧೆಯಲ್ಲಿ ಶ್ರೇಯ ಸಮಾಧಾನಕರ ಬಹುಮಾನವನ್ನು ಗೆದ್ದು ಶಾಲೆಗೆ ಕೀರ್ತಿ ತಂದುಕೊಟ್ಟರು.

## ಪ್ರವಾಸ



**ಶೇಷಾದ್ರಿಪುರಂ**, ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯಲ್ಲಿ ನವೆಂಬರ್ 19ರಂದು ಶಾಲೆಯ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳನ್ನು ಶಿವಕೋಟೆ ಬಳಿಯಿರುವ 'ಹಿತಕಾರಿ ನರ್ಸರಿ'ಗೆ ಕರೆದೊಯ್ಯಲಾಗಿತ್ತು. ವಿದ್ಯಾರ್ಥಿಗಳು ಅಲ್ಲಿದ್ದ ಹಲವಾರು ಔಷಧಿ ಗಿಡಗಳ ಬಗ್ಗೆ ತಿಳಿದುಕೊಂಡರು ಹಾಗೂ ಪ್ರಕೃತಿ ಸೌಂದರ್ಯವನ್ನು ಸವಿದರು.

## Air Rifle, Air Pistol Shooting Competition



**Kumara Park**, Seshadripuram English High School, Nov. 29 – hosted the District Level 10m Air Rifle and Air Pistol Shooting Competition and selection trials for Bangalore North Zone at the SICM Shooting Academy. The Chief Guest was Raghu Chandra, Block Educational Officer, with Prof. G.K. Manjunath, Principal of SCPUC, presided the event. Guests of Honour included Narashimaiah and Smt. Gayathri Devi. Special Invitees were Prof. Vidya Shivannavar and Capt. R. Chikka Rangaswamy.

**"ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರಿಕನನ್ನಾಗಿ ಮಾಡುತ್ತದೆ." – ಡಾ. ಎಸ್. ರಾಧಾಕೃಷ್ಣನ್**

## Literary Books Launch



Seshadripuram, Seshadripuram College, Nov. 16 – Department of English, in association with Sumangali Seva Ashram, organized a book launch event featuring works by Smt. N. Sridevi: Harmonious Horizons, Joy of Stamp Collecting, and Saga of Buddhism. Nadoja Dr. Hampa Nagarajaiah, who launched the books, emphasized the benefits of reading, Buddhism's influence in Asia, and the aesthetics of musical instruments. Smt. Rani Satish (Ex-Minister, Govt. of Karnataka) inaugurated the event, sharing reflections on her political journey. Dr. Sapna G.S., Head, Department of English, delivered the welcome address. Dr. S.G. Susheelamma, President of Sumangali Seva Ashram, presided and spoke on spirituality. Chief Guest Nadoja Dr. Wooday P. Krishna (Secretary, SET) praised the profound ideas in the books.

## Workshop on Business Studies



Seshadripuram, Seshadripuram Composite PU College, Sep. 30 – organized a one-day workshop for Business Studies and Accountancy in collaboration with the Department of School Education (Pre-University), Bengaluru North District. The event was inaugurated by Raju N, Deputy Director of the Department of School Education (Pre-University), Bengaluru North District. The occasion was graced by Krishna Murthy R., Secretary of BNDPUCPA and Principal of Hombegowda PU College. Mahabaleshwara Tunga, Principal of Soundarya PU College was the resource person for Accountancy, and Krishna Kumar G.C., Lecturer in Business Studies at SHVNM Government PU College, was the resource person for Business Studies. Approximately 280 faculty members participated in the workshop.

## SET Founders Cup



Seshadripuram, Seshadripuram Institute of Commerce and Management, Nov. 19 – Sports Department organized SET Founders Cup Inter Institute Archery, Badminton, Shooting and Power Lifting Competition for Men and Women.

## 11th SET Merit Scholarship Distribution




Mysuru, Seshadripuram Degree College, Sep. 28 – organized the 11th SET Merit Scholarship distribution ceremony recognizing students of exceptional merit. Dr. B.R. Ravikanthe Gowda, IPS, was the chief guest, urging students to contribute to the society with patience and perseverance. Nadoja Dr. Wooday P. Krishna highlighted the institution's 94-year dedication to quality and affordable education. Scholarships of Rs. 10,000 each were awarded to 32 students who scored 90-95% in PUC, while 13 students with over 95% received free education for a year. The event also honored 18 students with Appreciation Certificates.

## Aarambh – Intercollegiate PU Fest






Yelahanka, Seshadripuram First Grade College, Nov. 9 – hosted Aarambh-2024, an inter-college PU fest featuring cultural, management, and sports events. Highlights included Best Manager, Mad Ads, Business Quiz, Treasure Hunt, Group Dance, Solo Singing, Solo Dance, Fashion Show, and E-Sports (FreeFire). Winners included Kusumanjali (Bapu PU College) as Best Manager, MES PU College for Mad Ads, and Vidya Poorna Pragna PU College for Business Quiz. Bishop Cotton PU College excelled in the Treasure Hunt, while Shree Ayappa Educational Center shone in Group Dance and Solo Dance. Manoj N's team claimed victory in E-Sports.

## Guest Lecture on Anti-Ragging



Seshadripuram, Seshadripuram Law College, Nov. 8 – In coordination with the Anti-Ragging Cell, Grievance Cell, and SC/ST Cell, a guest lecture titled "Creating a Culture of Respect: A Law Student's Guide to Anti-Ragging" was organized. Dr. Upankar Chutia, Associate Professor at Alliance School of Law, Bengaluru, was the resource person for the event.

## Visit to ISRO



Yelahanka, Seshadripuram Public School, Students of Grades X and XII visited ISRO to enhance career awareness and development. They explored exhibits, interacted with scientists, and experienced an inspiring educational visit.

"The children of today will make the India of tomorrow. The way we bring them up will determine the future of the country."
– Jawaharlal Nehru

## Organic Dhoop Workshop for Eco-Friendly Entrepreneurship



Seshadripuram, Seshadripuram Evening College – Akruthi (Incubation Center) and Nisarga Mitra (Eco-Club) organized a workshop on making organic dhoop for air purification and promoting student entrepreneurship. The event was presided over by Nadoja Dr. Wooday P. Krishna, General Secretary of Seshadripuram Education Trust, with the presence of Trustee Mruthunjaya, life member Veerbhadrayya, and Samarpana leaders. Dr. N. S. Satish, Principal, led the event, and trainer Kishor C guided 20 students in creating 100 organic dhoops.

## NSS Drives for Kalyani Restoration and Environmental Care







Yelahanka, Seshadripuram First Grade College, Sep. 22 and Oct. 6 - NSS unit recently undertook impactful initiatives focused on heritage preservation and environmental conservation.

On Sept. 22 as part of the "Swachhata Hi Seva" campaign, NSS volunteers undertook the cleaning and restoration of a 700-year-old Kalyani at Vatadahosahalli, Gowribidanur Taluk. The effort aimed to preserve the historical and environmental significance of the site. Volunteers removed debris, plastic, and accumulated dirt, demonstrating their dedication to protecting local heritage.

On Oct 6 - in collaboration with the Youth Empowerment Department, NSS Regional Centre Bengaluru, and other state-level bodies, the NSS unit worked to revive the ancient Jagli Katte and Kalyani at Manchenahalli, built nearly 180 years ago. They also restored a historic pond in Jarabandahalli village, originally constructed for water conservation and religious purposes. Through their dedicated efforts, the pond has been rejuvenated, earning praise from community leaders and officials for preserving this vital heritage resource and environment.

## State Level Rifle Shooting Competition



Seshadripuram, Seshadripuram Composite PU College, Nov 21 & 22 – in association with School Education (Pre-University) Bengaluru North, hosted State Level Rifle Shooting Competitions for PU students. The event was inaugurated by Smt. Sindhu B. Roopesh, IAS, Director, KSEAB (PU), and presided over by N. Raju, Deputy Director, KSEAB, Bengaluru North. Nadoja Dr. Wooday P. Krishna, Honorary General Secretary, SET, was the Chief Guest. Other dignitaries included Dr. Gubbigoodu Ramesh, Asst. Director of Sports, Smt. Sandhya Menezes, President, BNDPUA, and Prof. G.K. Manjunath, Principal, SCPUC. The valedictory function, presided over by N. Raju, featured Kum. Yukti Rajendra, International Air Rifle Shooter, as the Chief Guest. Students from across Karnataka participated in various rifle shooting events.

## Orientation Program



Seshadripuram, Seshadripuram Law College, Oct. 26 – held an orientation program to welcome new students and introduce them to the college's academic, cultural, and social aspects. The distinguished guests were Mr. Dinesh Hegde and Dr. Wooday P. Krishna, addressed the students. Hegde's interactive session included answering student's questions, while Dr. Krishna delivered an inspiring speech. The program also honoured students who achieved over 90% in their PUC and Degree courses with meritorious awards.

## Young Climate Champion



Seshadripuram, Seshadripuram College, Nov. 16 – The Eco Mitra Forum of organized a workshop titled 'Young Climate Champion' The event was held in collaboration with Earth Day Network India and Bharavase NGO. The workshop was led by Sunil Kumar, founder of Bharavase, who was the resource person, inspiring participants to take proactive steps toward environmental sustainability.

"ಪುಸ್ತಕ ಓದುವ ಹವ್ಯಾಸವಿರುವವನು ಎಲ್ಲಿ ಹೋದರೂ ಸುಖವಾಗಿರಬಲ್ಲ." – ಮಹಾತ್ಮ ಗಾಂಧೀಜಿ

## A Talk on Gandhi's Thoughts - Relevance to Present Society



Seshadripuram, Seshadripuram Law College, Nov. 5 – in collaboration with Karnataka Gandhi Smaraka Nidhi and Gandhi Peace Foundation, Bengaluru, organized a one-day discussion session on "Gandhi's Thoughts-Relevance to Present Society." The event was inaugurated by Chief Guest Prof. G. B. Shivaraju, Gandhi Sevaratna awardee and Director of Karnataka Gandhi Memorial Fund. Nadoja Dr. Wooday P. Krishna, Chairman of the Fund and Principal Secretary of Seshadripuram Educational Trust, presided over the program. Dr. N. S. Satish, Secretary of Gandhi Peace Foundation and Principal of Seshadripuram Evening College, led the first session, followed by Dr. Abida Begum, Director of Gandhi Samskara Vichara Pariksha, in the second session.

## Quintessence Club – Industry Innovation Hub



Seshadripuram, Seshadripuram College, the Post Graduate Department of Business Administration marked a significant milestone with the inauguration of its Quintessence Club – Industry Innovation Hub. The event was graced by the presence of H. S. Subramanya Holla, President of the Hotel Association, Bengaluru, and the owner of Udupi Krishna Bhavan.

## NSS Unit conducts Street Play and Jatha on AIDS Awareness



Seshadripuram, Seshadripuram Institute of Commerce and Management in association with Karnataka State AIDS Prevention Society, organized a Street Play and Jatha to raise awareness about AIDS. The event, held at the Central Bus Stand and Shivananda Circle, saw 22 volunteers actively engaging the public through impactful performances and messages, promoting awareness and prevention of AIDS.

## SET Merit Scholarship Awards



Yelahanka, Seshadripuram First Grade College, Sep. 24 – Hosted the 32nd Orientation and SET Merit Scholarship Awards. The event began with a traditional invocation dance by Srujana and her team, followed by the lighting of the lamp. Dr. S.N. Venkatesh, Principal, welcomed attendees, while Nadoja Dr. Wooday P. Krishna, Secretary, gave the presidential address, stressing the importance of education. The highlight was the presentation of SET Merit Scholarships to deserving students. The inauguration of the BBA Aviation program was also announced, with an informative presentation detailing the course's career prospects. The chief guest, Dr. Rakesh S. G., Principal of M. Visvesvaraya Institute of Technology, inspired students with a motivating speech on the power of continuous learning.

## Prathibha – The Talent Hunt



Seshadripuram, Seshadripuram Composite PU College, Nov. 15 – an inter-school competition for Class X students, was held with participation from 20 schools in events like dance, singing, quiz, painting, and sports. The event was inaugurated by Alumna Flying Officer Kum. Jyothi Gowda D.R., with Cine heroine Ms. Raveeksha as Chief Guest. Notable alumni of SCPUC judged the competitions.

## Shuttle Badminton Tournament-2024



Kengeri, Seshadripuram Independent PU College, Sep. 25 – In collaboration with the Department of Pre-University Board, Bengaluru South, organized the District Level Inter-Collegiate Shuttle Badminton Tournament 2024. The Chief Guest was Manoj Kumar Kolla, Deputy Director of PU Education, Bengaluru South. Guests of Honour included Raghu Mariswamy, International Badminton Player and W.D. Ashok, Trustee of Seshadripuram Educational Trust.

## Childhood Cancer Awareness Programme

Seshadripuram, Seshadripuram Law College, Dec. 18 – organised a Childhood Cancer Awareness Programme in the campus. Trustees W.D. Vijayakumar, K. Krishnaswami participated in the programme. Lion Gopal V., Lion Shobha Srinivas, Principal Dr Pranitha B.S. and the students attended.

"There can be no keener revelation of a society's soul than the way in which it treats its children" – Nelson Mandela

## Seminar on Relevance of Indian Knowledge System in Modern Times



Seshadripuram, Seshadripuram College, Post Graduate Department, Oct. 30 – the Centre for Indian Ethos, in collaboration with The Mythic Society, Bengaluru, organized a seminar on “Relevance of Indian Knowledge System in Modern Times.” The keynote speaker was Dr. Raj Vedam, Director of Arsha Vidya Satsanga and Faculty at the Hindu University of America, U.S.A. The event was graced by M.R. Prasanna Kumar, Managing Committee Member of The Mythic Society, along with Dr. B.G. Bhaskara and Dr. Bhargavi V R.

## Awareness Programme on Disaster Management



Seshadripuram, Seshadripuram Institute of Commerce and Management, Nov 4. - Youth Red Cross Wing in association with Rotaract Club had organised Awareness Programme on Disaster Management. The chief Guest for the Programme was Dr. Kumar V.L.S Master trainer, Disaster Management and First Aid, National and Regional, Disaster response team member Indian Red Cross society, Bengaluru and Raju Chandrashekar State Awardee Member secretary, District Disabled Rehabilitation Centre Bengaluru urban district.

## District Level Air Rifle Competition



Seshadripuram, Seshadripuram Independent PU College – Department of School Education and Seshadripuram Independent Pre University College jointly organised Taluk & District Level Air Rifle and Air pistol Competition 2024. The chief guest, Raju N, Deputy Director, Dept of School Education (Pre University) Bengaluru North District, addressed the gathering and thanked the Seshadripuram Educational Trust and management for supporting the event. R.V. Manjunath, the principal, Gururaj physical instructor, were present at the event.

## Annual Athletic Meet 2024



Seshadripuram, Seshadripuram Independent PU College, Nov. 22 – Sandeep R., Fitness Coach and Chief Guest, addressed the participants, emphasizing the importance of fitness and sportsmanship. The event was presided by N.P. Karthik, Chairman, Governing Council, Seshadripuram Independent PU College. R.V. Manjunath, the principal, Gururaj physical instructor, were present at the event.

## Annual Athletic Meet




Seshadripuram, Seshadripuram Composite PU College, Nov. 29 – held its 29th Annual Athletic Meet at Malleshwaram Playground. Krishnaswamy K., Trustee, SET, inaugurated the event. Chief Guest Gopinath K., International Para Sportsperson, emphasized on discipline to achieve life goals. Guest of Honour Lt. Karthik K.S., Physical Education Director and NCC Associate Officer, Prof. G.K. Manjunath, Principal also graced the event.

## Annual Sports Meet



Kengeri, Seshadripuram Independent PU College, Nov 11 – 21st Annual Sports Meet was held at Bengaluru University. The Chief Guest was Dr. R. Srikanth, Nodal Officer Department of Collegiate Education, who inspired the students with inspirational words, presided by C. Prashanth Kumar, Chairman Governing Council, Seshadripuram Independent PU College, Dr. Manjunath R. Principal, Staff and Students took a part.

## Building Safe and Inclusive Campus



Seshadripuram, Seshadripuram Institute of Commerce and Management, Oct. 29 – PoSH and IQAC jointly organized Two Days Workshop on “Building Safe and Inclusive Campus: Understanding PoSH Act”. The resource person for the event was Prathibha Rai a certified PoSH Trainer, Bengaluru.

“ಜ್ಞಾನವೇ ಜೀವನದ ಸುಖವನ್ನು ಹೆಚ್ಚಿಸುವ ಬೆಳಕು.” – ಖಲೀಲ್ ಗಿಬ್ರಾನ್